ವಿಷಯ:- ಪುತ್ತೂರಿನಲ್ಲಿ ಕ್ರೀಡಾಂಗಣ ಕಾಮಗಾರಿ.

57(387)

ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು):- ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

1) ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನಲ್ಲಿ ನಡೆಯುತ್ತಿರುವ ಸ್ಟೇಡಿಯಂ ಕಾಮಗಾರಿಯು ಯಾವ ಹಂತದಲ್ಲಿದೆ? ಈ ವರ್ಷ ಈ ಯೋಜನೆಗೆ ಸರ್ಕಾರದಿಂದ ಕೊಡಲ್ಪಟ್ಟ ಹಣವೆಷ್ಟು;

2) ಈ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಅಜಯಕುಮಾರ್ ಸರ್ ನಾಯಕ್ (ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು):-

1) ಕ್ರೀಡಾಂಗಣದ ಕಾಮಗಾರಿಯು ಜಮೀನು ಸಮತಟ್ಟುಗೊಳಿಸುವ ಕಾರ್ಯ ಪೂರ್ಣಗೊಂಡಿದೆ. ತಡೆಗೋಡೆ ನಿರ್ಮಿಸಲಾಗಿದೆ. ಈ ವರ್ಷದಲ್ಲಿ ಹಣ ಬಿಡುಗಡೆಯಾಗಿರುವುದಿಲ್ಲ.

2) ಕೇಂದ್ರ ಸರ್ಕಾರದ ಅನುದಾನ ಪಡೆದ ನಂತರ ಕ್ರೀಡಾಂಗಣ ನಿರ್ಮಾಣ ಕಾರ್ಯ ಪೂರ್ಣಗೊಳಿಸಲಾಗುವುದು.

ಶ್ರೀ ಡಿ.ವಿ. ಸದಾನಂದಗೌಡ:- ಅಧ್ಯಕ್ಷರೇ, ಈ ಉತ್ತರವನ್ನು ತಾವು ಪರಿಶೀಲಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ನನ್ನ ಪ್ರಶ್ನೆ ಇಷ್ಟೆ, ಇವತ್ತು ರಾಜ್ಯದಲ್ಲಿ ಏನಾಗಿದೆ ಅಂದರೆ ಹಿಂದಿದ್ದ ಸಣ್ಣ ಸಣ್ಣ ಕ್ರೀಡಾಂಗಣಗಳನ್ನು ಬಹುಪಾಲು ದೊಡ್ಡದು ಮಾಡುತ್ತಿದ್ದರು ಹಾಗೆ ದೊಡ್ಡ ಕ್ರೀಡಾಂಗಣ ಮಾಡಲು ಶುರುಮಾಡಿದ ಮೇಲೆ ಏನಾಗಿದೆ ಎಂದರೆ ಹಿಂದಿದ್ದ ಕ್ರೀಡಾಂಗಣದಲ್ಲಿ ಆಟ ಆಡುವ ಹಾಗೂ ಇಲ್ಲ, ಮುಂದೆ ಅದಷ್ಟು ಶೀಘ್ರವಾಗಿ ನಿರ್ಮಾಣ ಮಾಡುವ ಹಾಗೂ ಇಲ್ಲದ ಪರಿಸ್ಥಿತಿ ನಿರ್ಮಾಣವಾಗಿದೆ. ಆದಕಾರಣ ಇದಕ್ಕೆ ತಕ್ಷಣ ಕಾರ್ಯ ಪ್ರವೃತ್ತರಾಗಬೇಕು. ಎರಡನೆಯದು, ವಿಶೇಷ ಸಂಗತಿ ಏನೆಂದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗಾಗಲೇ ಸುಳ್ಯ ಬಂಟ್ವಾಳ ಕುಂದಾಪುರ ಮೂರು ಕಡೆ ಸುಮಾರು 20 ಲಕ್ಷ ಹಣವನ್ನು ಕ್ರೀಡಾಂಗಣ ನಿರ್ಮಾಣಕ್ಕೆಂದು ಇಟ್ಟಿದ್ದಾರೆ. ಆದರೆ ಇದುವರೆವಿಗೂ ಆ ಮೂರು ಕಡೆ ಯಾವ ಸ್ಥಳ ಎಂದು ಸಹ ನಿಗದಿಯಾಗದ ಕಾರಣ ಆ ಹಣವನ್ನು ಈಗ ಪುತ್ತೂರಿಗೆ ಕೊಟ್ಟು ಈ ಕೆಲಸ ಮುಗಿಸಿ ಬರುವ ವರ್ಷ ಪುತ್ತೂರಿಗೆ ಕೊಡುವುದನ್ನು ಆ ಮೂರು ಕ್ಷೇತ್ರಗಳಿಗೆ ವಿತರಣೆ ಮಾಡಬಹುದೇ ಎಂಬುದು ಮಾನ್ಯ ಮುಖ್ಯ ಸಚೇತಕರು ಮಂತ್ರಿಗಳ ಹಿಂದೆ ಬಂದು ಅದನ್ನು ಹೀಗೆ ಮಾಡಬೇಡಿ ಎಂದು ಸೂಚನೆ ಕೊಡುತ್ತಿದ್ದಾರೆ. ದಯವಿಟ್ಟು ಅವರನ್ನು ಅವರ ಸ್ವಸ್ಥಾನಕ್ಕೆ ಕಳಿಸಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು:- ಯಾವ್ಯಾವಾಗ, ನೀವ್ಯಾರಾರು, ಮಂಗಳೂರಿನವರು ಸ್ಥಾನಪಲ್ಲಟ ಮಾಡುತ್ತೀರಿ ಎಂಬುದೇ ಗೊತ್ತೇ ಆಗುವುದಿಲ್ಲ. ಏಕೆಂದರೆ ಎಲ್ಲ ಸಮುದ್ರ ನೋಡಿ, ಎಲ್ಲಿ ಆಳ ಇದೆ, ಎಲ್ಲಿ ಕಡಿಮೆ ಇದೆ ಎನ್ನುವುದು ನಮಗೆ ಗೊತ್ತೇ ಆಗುವುದಿಲ್ಲ.

ಶ್ರೀ ಕುಂಬ್ಳೆ ಸುಂದರರಾವ್:- ಮಂಗಳೂರು ಸಮುದ್ರದಲ್ಲಿ ಶಾರ್ಕ್ ಇಲ್ಲ ತಿಮಿಂಗಿಲ್ಲ ಇಲ್ಲ ಒಳ್ಳೆ ಮೀನುಗಳೇ ಇರುವುದು.

ಅಧ್ಯಕ್ಷರು:- ಸುಂದರರಾಯರು ಇದ್ದಾರೆ ಎಂದು ಗೊತ್ತಿದೆ ನಮಗೆ.

ಶ್ರೀ ಡಿ.ವಿ. ಸದಾನಂದಗೌಡ:- ಹಿಂದೆ ಸಚಿವರು ನಮ್ಮ ಊರಿಗೆ ಬಂದಾಗ ಎಲ್ಲಿ ಕಾಮಗಾರಿಗಳಾಗುತ್ತವೆ ಅಲ್ಲಿಗೆ ಈ ಹಣವನ್ನು ಹಸ್ತಾಂತರ ಮಾಡುತ್ತೇವೆಂದು ಹೇಳಿದ್ದಾರೆ. ಅದನ್ನು ಈಗಲೂ ಹೇಳುತ್ತಾರೆಂಬ ಭರವಸೆಯಿಂದ ಈ ಪ್ರಶ್ನೆ ಕೇಳಿದ್ದೇನೆ.

ಶ್ರೀ ಅಜಯಕುಮಾರ್ ಸರ್‌ನಾಯಕ್:- ಅಧ್ಯಕ್ಷರೇ, ತಾಲೂಕು ಕ್ರೀಡಾಂಗಣದ ಕೆಲಸ ಜಿಲ್ಲಾಪರಿಷತ್ ಯೋಜನೆಯಲ್ಲಿ ಕೈಗೊಂಡಂಥಾದ್ದು, ತಾಲ್ಲೂಕ್ ಕ್ರೀಡಾಂಗಣಗಳಿಗೆ ರಾಜ್ಯ ಸರ್ಕಾರ ಕೇಂದ್ರ ಸರ್ಕಾರ ಮತ್ತು ಸ್ಥಳೀಯರ ವಂತಿಗೆಯಿಂದ ಮುಗಿಯಬೇಕಾದ ಯೋಜನೆಗಳು. ಪುತ್ತೂರು ಕ್ರೀಡಾಂಗಣಕ್ಕೆ ನಾವು ಆಡಳಿತಾತ್ಮಕ ಅನುಮತಿ 1993 ರಲ್ಲಿ ಕೊಟ್ಟಾಗ 26 ಲಕ್ಷ ರೂ. ಅಂದಾಜು ಆದರದು. ಆ ಪೈಕಿ 10 ಲಕ್ಷ ರಾಜ್ಯ ಸರ್ಕಾರದ್ದು 12 ಲಕ್ಷ ಕೇಂದ್ರ ಸರ್ಕಾರದ್ದು ಉಳಿದ 4 ಲಕ್ಷ ಸ್ಥಳೀಯರವಂತಿಗೆ ಆಗಬೇಕಾಗುತ್ತದೆ. ರಾಜ್ಯ ಸರ್ಕಾರದ ನಮ್ಮ ಷೇರು 10 ಲಕ್ಷ ಏನಿದೆ ಅದನ್ನು ಖರ್ಚುಮಾಡಿದ್ದೇವೆ. ಕೇಂದ್ರ ಸರ್ಕಾರದ ಪಾಲು 12 ಲಕ್ಷ ಬರಬೇಕಾಗಿದೆ, ನಾವು ಪ್ರಪೋಸಲ್ ಕಳಿಸಿದ್ದೇವೆ. ಬಹಳಷ್ಟು ತಾಲ್ಲೂಕ್ ಕ್ರೀಡಾಂಗಣಗಳಿಗೆ ಕೇಂದ್ರ ಸರ್ಕಾರದಿಂದ ಬರಬೇಕಾದದ್ದು ಬಹಳಷ್ಟು ಬಾಕಿ ಇದೆ. ಈಗಾಗಲೇ ನಾನೇ ಸ್ವತಃ ಹೋಗಿ ಸಂಬಂಧಿತ ಕೇಂದ್ರ ಸಚಿವರನ್ನು ಭೇಟಿ ಮಾಡಿ ಬರುವ ಏಪ್ರಿಲ್ ತಿಂಗಳಿನಲ್ಲಿ ಅವರು ಹಣ ಬಿಡುಗಡೆ ಮಾಡಲು ಒಪ್ಪಿಕೊಂಡಿದ್ದಾರೆ. ಆ ಹಣ ಬಿಡುಗಡೆಯಾದ ನಂತರ ಸಾಧ್ಯವಿದ್ದಷ್ಟು ಮಟ್ಟಿಗೆ ಕ್ರೀಡಾಂಗಣ ಮುಗಿಸಲು ಯತ್ನ ಮಾಡುತ್ತೇವೆ. ಅದರ ಜೊತೆಗೆ ಲೋಕಲ್ ವಂತಿಗೆ ಏನು ಕೊಡಿಸಿಕೊಡಬೇಕು ಅದಕ್ಕೆ ತಾವೂ ಸಹಕಾರ ಮಾಡಿಕೊಡಬೇಕೆಂದು ಮಾನ್ಯ ಸದಸ್ಯರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ:- ಈ ವಿಷಯದಲ್ಲಿ ಸರ್ಕಾರ ಒಂದು ಸ್ಟೇಟ್ ಲೆವೆಲ್ ಪಾಲಿಸಿ ಮಾಡಲು ಸಾಧ್ಯವಿದೆಯೇ? ಏಕೆಂದರೆ ಯಾವುದೇ ಕಾಮಗಾರಿ ಕೈಗೆತ್ತಿಗೊಳ್ಳುವ ಸಂದರ್ಭದಲ್ಲಿ ಅದನ್ನು ನಿಗದಿತ ಅವಧಿಯಲ್ಲಿ ಮುಗಿಸಬೇಕೆಂದು ನಿಶ್ಚಿಯಿಸಿದಾಗ ಕೇಂದ್ರ ಸರ್ಕಾರದ ವಂತಿಗೆ ಬರುತ್ತದೆಂದು ನಿರೀಕ್ಷಿಸುತ್ತ ಕೆಲಸ ನಿಲ್ಲಿಸುವುದನ್ನು ತಪ್ಪಿಸಲಿಕ್ಕೆ ಏನಾದರೂ ಬದಲಿ ವ್ಯವಸ್ಥೆ ಮಾಡಲು ಸರ್ಕಾರಕ್ಕೆ ಸಾಧ್ಯವಿದೆಯೇ? ಅದಕ್ಕೆ ಅವಕಾಶವಿದ್ದರೆ ಮುಂದಿನ ದಿನಗಳಲ್ಲಿ ಅಂತಹ ಪಾಲಿಸಿ ರೂಪಿಸಬಹುದೇ?

ಶ್ರೀ ಅಜಯಕುಮಾರ ಸರ್‌ನಾಯಕ್:- ಅಧ್ಯಕ್ಷರೇ, ಕೇಂದ್ರ ಸರ್ಕಾರದ ಹಣವನ್ನು ನಾವು ಕಾಯ್ದು ಕೂತರೆ ಇಲ್ಲಿ ಕೆಲಸ ಪೂರ್ತಿಯಾಗುವುದಿಲ್ಲ ಅದರ ಸಲುವಾಗಿ ಸಂಬಂಧಪಟ್ಟ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯದರ್ಶಿಗಳಿಗೆ ಸೂಚನೆ ಕೊಟ್ಟಿದ್ದೇನೆ, ಅವರು ಕೇಂದ್ರದ ಹಣಕ್ಕೆ ಕಾಯುವ ಅವಶ್ಯಕತೆ ಇಲ್ಲ ತಮ್ಮಲ್ಲೇ ಉಳಿತಾಯ ಮಾಡಿಕೊಂಡು ಇದನ್ನು ಮುಗಿಸಲಿಕ್ಕೆ ಪ್ರಯತ್ನ ಮಾಡಬೇಕು. ಕೇಂದ್ರ ಸರ್ಕಾರದ ಹಣ ಬಂದಾಗ ಅದನ್ನು ರಿ ಇಂಬರ್ಸ್ ಮಾಡುತ್ತೇವೆಂದು ಹೇಳಿದ್ದೇವೆ.